೪೮೪ (೧೧೧೧) ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು).—ಮಾನ್ಯ ಸಮಾಜಕಲ್ಯಾಣ ಮತ್ತು ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಮೊಳಕಾಲೂರು ತಾಲ್ಲೂಕಿನಲ್ಲಿ ನಾಗಸಮುದ್ರ ಗ್ರಾಮಕ್ಕೆ ಸರ್ಕಾರಿ ಪ್ರಾಥಮಿಕ ಶಾಲೆ ಕಳೆದ ಮೂರು ವರ್ಷಗಳ ಕೆಳಗೆ ಹಿಂದುಳಿದ ಜನಗಳಿಗೋಸ್ಕರ ಮಂಜೂರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಅಲ್ಲಿ ಒಂದು ಸಾರ್ವಜನಿಕ ವಿದ್ಯಾರ್ಥಿನಿಲಯವಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈಗಲಾದರೂ ಕಡು ಬಡಹುಡುಗರ ಉದ್ಧಾರಕ್ಕೋಸ್ಕರ ಒಂದು ಸಾರ್ವಜನಿಕ ವಿದ್ಯಾರ್ಥಿ ನಿಲಯವನ್ನು ತೆರೆಯಲು ಉದ್ದೇಶಿಸಿದ್ದೀರಾ ಹಾಗಿದ್ದಲ್ಲಿ, ಯಾವಾಗ ತೆರೆಯಲಾಗುವುದು?

ಶ್ರೀಮತಿ ಚಂದ್ರಪ್ರಭಾ ಅರಸು (ಸಮಾಜ ಕಲ್ಯಾಣ ಮತ್ತು ರೇಷ್ಮೆ ಸಚಿವೆಯವರು).—

ಅ) ಬಂದಿದೆ.

ಆ) ಬಂದಿದೆ.

ಇ) ಪರಿಶೀಲಿಸಲಾಗುವುದು.

ಶ್ರೀ ಎನ್. ಜಿ. ನಾಯಕ್.—ಮೂರುವರ್ಷಗಳಿಂದ ಅಲ್ಲಿಗೆ ಹಾಸ್ಟಲ್‌ನ ಸೌಲಭ್ಯವನ್ನು ಕೊಟ್ಟಿಲ್ಲ ಆದುದರಿಂದ ೧೯೮೪-೮೫ನೇ ಇಸ್ವಿಗಾದರೂ ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಅಧ್ಯಕ್ಷರೇ, ಹಿಂದೆ ಹಾಸ್ಟಲನ್ನು ಕೊಡುವುದಕ್ಕೆ ಯಾವುದೇ ನೀತಿ ನಿಯಮವನ್ನು ಅನುಸರಿಸುತ್ತಿರಲಿಲ್ಲ. ಈಗ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವಾಗ ಕೆಲವು ನಿಯಮಗಳನ್ನು ಅನುಸರಿಸಬೇಕೆಂದು ಸೂಚನೆ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳಿದಹಾಗೆ ೧೯೮೪-೮೫ರಲ್ಲಿ ಎಸ್. ಸಿ. ಎಸ್ ಟಿ. ಯವರಿಗೆ ವಿದ್ಯಾರ್ಥಿನಿಲಯವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

Irrigation facilities in Honnavar and Bhatkal taluks

485 (1117) SRI. R. N. NAIK (Bhatkal).—Will the Minister for Public works and Irrigation be Pleased to state:—

a) What is the extent of Land for which irrigation facilities are made available in the taluks of Honnavar and Bhatkal respectively ?

b) From how many (1) Tanks (2) Bhandharas and (3) Electric pumpsets Government have arranged for irrigation in these two taluks ?

SRI R. N. LAKSHMIPATHI (Minister of State for Minor irriga-tion).—

(a) 979 Hectares and 841 Hectares of land in Honnavar and Bhatkal Taluk, respectively.

(b) Irrigation facilities Porvided.

HONNAVAR TALUK

i) 20 tanks
ii) 8 Bandhars
iii) 6 Lift Irrigation Schemes (from Electric pumpsets).

BHATKAL TALUK

i) 9 tanks
ii) 31 Bandhars

(Member Absent)

ಲೋಕೋಪಯೋಗಿ ಇಲಾಖೆಯಲ್ಲಿ ದುಡಿಯುತ್ತಿರುವ ಕೂಲಿಗಾರರಿಗೆ ಬಾಕಿ ಇದ್ದ ಹೆಚ್ಚುವರಿ ಕೂಲಿ ಕೊಡುವ ಬಗ್ಗೆ ಕುರಿತು

ಳಲ್ (೧೨೬೪) ಶ್ರೀ ಎ. ರುಕ್ಮಯ್ಯ ಪೂಜಾರಿ (ಬಂಟ್ವಾಳ).—ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬಂಟ್ವಾಳ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯಲ್ಲಿ ದುಡಿಯುತ್ತಿರುವ ಗ್ಯಾಂಗ್‌ಮನ್ ಕೂಲಿಗಾರರಿಗೆ ಹಿಂದಿನ ಹೆಚ್ಚುವರಿ ಸಂಬಳ ಕೊಡಲು ಬಾಕಿ ಉಳಿದಿದೆಯೇ ?

ಆ) ಹಾಗಿದ್ದಲ್ಲಿ ಒಟ್ಟು ಎಷ್ಟು ಹಣ ಕೊಡಬೇಕಾಗಿದೆ ?

ಇ) ಅದನ್ನು ಅವರಿಗೆ ಯಾವಾಗ ಸಂದಾಯ ಮಾಡಲಾಗುವುದು.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು.).—

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ —ಅಧ್ಯಕ್ಷರೇ, ಮೂಲ ಪ್ರಶ್ನೆ ಇಷ್ಟೆ, ಮಿನಿಮಂ ವೇಜಸ್ ಕೊಡುವ ಬಗ್ಗೆ ಲೇಬರ್ ಕೋರ್ಟಿಗೆ ವ್ಯಾಜ್ಯ ಹೋದುದರ ಪರಿಣಾಮವಾಗಿ ಅವರು ಅವಾರ್ಡ್‌ನ್ನು ಕೊಟ್ಟಿದ್ದಾರೆ. ಇದರಿಂದ ನಾವು ಹೈಕೋರ್ಟಿನ ಮುಂದೆ ಇದರ ಬಗ್ಗೆ ತೀರ್ಮಾನಕ್ಕಾಗಿ ಹಾಕುವ ನಿರ್ಣಯವನ್ನು ಮಾಡಿದ್ದೇವೆ.

ಶ್ರೀ ರುಕ್ಮಯ್ಯ ಪೂಜಾರಿ.—ಬಂಟವಾಳ ತಾಲ್ಲೂಕಿನ ಸುಮಾರು ೪೦ ಜನ ಗ್ಯಾಂಗ್‌ಮೆನ್ ಕೂಲಿಗಳಿಗೆ ಒಬ್ಬೊಬ್ಬರಿಗೆ ೬೦೦ ರೀಂದ ಒಂದೂವರೆ ಸಾವಿರ ರೂಪಾಯಿಗಳವರೆಗೆ ಬಾಕಿ ಕೊಡಲಿಕ್ಕೆ ಇದೆ. ಈಗ ಇದು ಹೈಕೋರ್ಟಿನಲ್ಲಿದೆಯೆಂದು ಹೇಳಿದಿರಿ. ಆದರೆ ನನಗೆ ತಿಳಿದು ಬಂದ ಪ್ರಕಾರವಾಗಿ ಅದು ಹೈಕೋರ್ಟಿನಲ್ಲಿ ತೀರ್ಮಾನವಾಗಿ ಸುಪ್ರೀಂ ಕೋರ್ಟಿಗೆ ಹೋಗಿದೆ. ಬಡವರ ಪರವಾಗಿ ಮಾತನಾಡತಕ್ಕ ಈ ಸರ್ಕಾರ ಕಡು ಬಡವರಾಗಿರತಕ್ಕವರಿಗೆ ಕೊಡಬೇಕಾದ ಹಣವನ್ನು ಕೂಡಲೇ ಕೊಡಿಸುವ ಬಗ್ಗೆ ವ್ಯವಸ್ಥೆ ಮಾಡುತ್ತಿರಾ ?

ಶ್ರೀ ಎಚ್. ಡಿ. ದೇವೇಗೌಡ.—ಗ್ಯಾಂಗ್‌ಮನ್ ರವರಿಗೆ ಕೊಡತಕ್ಕ ವೇತನ. ದಿನಗೂಲಿ. ಒಂದೊಂದು ಭಾಗದಲ್ಲಿ ಒಂದೊಂದು ಪರಿಸ್ಥಿತಿ ಇದೆ. ಹೈದರಾಬಾದ್ ಕರ್ನಾಟಕದಲ್ಲಿ ಒಂದು ರೀತಿ ಯಾಗಿದೆ. ಸೌತ್ ಕೆನರಾ ಭಾಗದಲ್ಲಿ ಒಂದು ರೀತಿ ಯಾಗಿದೆ ೧೯೭೪ ರಿಂದ ೭೯ರವರೆಗೆ ನಡೆದಂಥ ಅವ್ಯವಹಾರದಿಂದ ಮಿನಿಮಂ ವೇಜಸ್ ಮತ್ತು ಪೆಡ್ಯೂಲ್ ರೇಟ್‌ನ ಬಗ್ಗೆ ಲೇಬರ್ ಕೋರ್ಟಿಗೆ ತೆಗೆದುಕೊಂಡು ಹೋದರು. ಸುಮಾರು ೩೭ ಸಾವಿರ ರೂಪಾಯಿಗಳ ಅವಾರ್ಡ್‌ನ್ನು ಅವರು ಪಾಸ್